**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.139/2019**

**(ಚಾ.ಸಾ.15/ಪ್ರಾ.ಸಾ.8)**

ತಾಃ 16.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಸಯ್ಯದ್ ಅಮ್ಜದ್ |
| ತಂದೆಯ ಹೆಸರು | ಅಕ್ಬರ್ |
| ವಯಸ್ಸು | 33 ವರ್ಷ |
| ಉದ್ಯೋಗ | ಚಾಲಕ |
| ವಾಸ ಸ್ಥಳ | ಅಂಬೇಡ್ಕರ್ ನಗರ, ವೈಟ್ ಫೀಲ್ಡ್, ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

5 ನೇ ಆರೋಪಿ ಆಯಿಷಾ ನನಗೆ ಗೊತ್ತು. ದಿಃ01.09.2018 ರಂದು ಪೊಲೀಸರು ವರ್ತೂರು ಪೊಲೀಸ್ ಠಾಣೆಗೆ ನನ್ನನ್ನು ಕರೆಸಿದ್ದರು. ಠಾಣೆಯಲ್ಲಿ ಪೊಲೀಸರು 5 ನೇ ಆರೋಪಿಯನ್ನು ತೋರಿಸಿ ಆಕೆಯ ವಶದಲ್ಲಿ ಇದ್ದ ಒಂದು ಲಾವಾ ಕಂಪನಿಯ ಮೊಬೈಲ್ ಪೋನ್ ಮತ್ತು ಒಪ್ಪೊ ಕಂಪನಿಯ ಮೊಬೈಲ್ ಪೋನ್ ಗಳನ್ನು ಆಕೆಯು ಹಾಜರುಪಡಿಸಿದ ಮೇರೆಗೆ ಜಪ್ತಿಪಡಿಸಿ ಪಂಚನಾಮೆ ಮಾಡಿ ನನ್ನ ಸಹಿ ಪಡೆದಿರುತ್ತಾರೆ. ಸದರಿ ಪಂಚನಾಮೆಯನ್ನು ನಿ.ಪಿ.43 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ.43(ಎ) ಎಂದು

ಗುರುತಿಸಲಾಯಿತು. ಸದರಿ ಮೊಬೈಲ್ ಫೋನ್ ಗಳನ್ನು ಸಾಕ್ಷಿಯು ಗುರುತಿಸಿದ್ದು ಅವುಗಳನ್ನು ಮು.ಮಾ.23 ಮತ್ತು 24 ಎಂದು ಗುರುತಿಸಲಾಯಿತು.

<u>ಪಾಟೀ ಸವಾಲುಃ ಆರೋಪಿತರ ಪರ ಶ್ರೀ.ಎಮ್ ಆರ್ ಎನ್ ವಕೀಲರಿಂದಃ</u>

2. ನಾನು ಠಾಣೆಗೆ ಹೋದಾಗ 5ನೇ ಆರೋಪಿ ಆಯಿಷಾ ರವರನ್ನು ಮೊದಲ ಬಾರಿಗೆ ನಾನು ನೋಡಿದ್ದೇನೆ. ನಮ್ಮ ಮನೆಯಿಂದ ಪೊಲೀಸ್ ಠಾಣೆಗೆ 2 ವರೆ ಕಿ.ಮೀಟರ್ ದೂರ ಆಗುತ್ತದೆ. ನಾನು ಪಂಚನಾಮೆಗೆ ಸಹಿ ಮಾಡುವ ಪೂರ್ವದಲ್ಲಿ ಪೊಲೀಸರಿಗೆ ನನ್ನ ಮೊಬೈಲ್ ನಂಬರ್ ಅಥವಾ ನನ್ನ ವಿಳಾಸ ತಿಳಿದಿರಲಿಲ್ಲ ಎಂದರೆ ಸರಿ. ನಾನು ಮನೆಯಲ್ಲಿ ಇದ್ದಾಗ ಪೊಲೀಸರು ನೋಟೀಸ್ ಜಾರಿ ಮಾಡಿದ್ದು ಅವರ ಹೆಸರು ನನಗೆ ಗೊತ್ತಿಲ್ಲ. ನೋಟೀಸ್ ನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ದಿಃ01.09.2018 ರಂದು ಬೆಳಿಗ್ಗೆ 8.30 ಗಂಟೆಗೆ ನನಗೆ ನೋಟೀಸ್ ನೀಡಿದ್ದಾರೆ. ನಾನು ಠಾಣೆಗೆ ಹೋದಾಗ ಬೆಳಿಗ್ಗೆ 10.00 ಗಂಟೆ ಆಗಿತ್ತು. ಸುಮಾರು ಒಂದು ಗಂಟೆಯ ಕಾಲ ಠಾಣೆಯಲ್ಲಿ ಇದ್ದೆ. ನಿ.ಪಿ.43 ರ ಪಂಚನಾಮೆಗೆ ನಾನು ಮತ್ತು ಬಾಬುರವರು ಸಹಿ ಮಾಡಿರುತ್ತೇವೆ. ಬೇರೆ ಯಾರಾದರೂ ಸಹಿ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. ಅದರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಅಬ್ದುಲ್ ರೆಹಮಾನ್ ಎಂಬುವವರು ನನ್ನ ಸಂಬಂಧಿ ಎಂದರೆ ಸರಿಯಲ್ಲ. ಅವರು ಯಾರು ಎಂದು ನನಗೆ ಗೊತ್ತಿಲ್ಲ. ಪೊಲೀಸ್ ಠಾಣೆಗೆ ಹೋದಾಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ನಾನು ನೋಡಿಲ್ಲ ಎಂದರೆ ಸರಿ. ಜಪ್ತಿಪಡಿಸಿದ ಮೊಬೈಲ್ ಗಳ ಸಂಖ್ಯೆ ನನಗೆ ಗೊತ್ತಿಲ್ಲ. ಒಂದು ಮೊಬೈಲ್ ನ ಪರದೆಯು ಒಡೆದು ಹೋಗಿತ್ತು, ಯಾವ ಮೊಬೈಲ್ ಎಂದು ನನಗೆ ಹೇಳಲು ಆಗುವುದಿಲ್ಲ. ಯಾರ ಹೆಸರಿನಲ್ಲಿ ಆ ಮೊಬೈಲ್ ಗಳು ಇದ್ದವು ಎಂದು ನನಗೆ ಗೊತ್ತಿಲ್ಲ. ಪಿರ್ಯಾದಿ ನನ್ನ ಸಂಬಂಧಿಯಾಗಿದ್ದು ಆ ದಿನ ಆರೋಪಿಯಿಂದ

ಪೊಲೀಸರು ಯಾವುದೇ ಮೊಬೈಲ್ ಗಳನ್ನು ಜಪ್ತಿಪಡಿಸದೇ ಇದ್ದರೂ ಪೊಲೀಸರ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

3. ಮು.ಮಾ.23 ಮತ್ತು 24 ಅನ್ನು ಪೊಲೀಸರು ಬಿಳಿ ಬಟ್ಟೆಯಲ್ಲಿ ಹಾಕಿ ಜಪ್ತಿಪಡಿಸಿ ಮೊಹರು ಮಾಡಿದ ಬಗ್ಗೆ ನನಗೆ ಜ್ಞಾಪಕ ಇಲ್ಲ. ನನ್ನ ಸಹಿ ಪಡೆದ ಚೀಟಿಯನ್ನು ಮೊಬೈಲ್ ಗಳ ಮೇಲೆ ಅಂಟಿಸಿರುವುದಿಲ್ಲ. ನಾನು ಇದೇ ಮೊದಲ ಬಾರಿಗೆ ಮೊಬೈಲ್ ಪೋನ್ ಗಳನ್ನು ನೋಡುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರು ಹೇಳಿಕೊಟ್ಟಂತೆ ನಾನು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.